ಓ.ಎಸ್ಃ 10/2015

ಡಿ. ಡಬ್ಲ್ಯೂ ಃ 01

**<u>ಸಾಕ್ಷಿಗೆ ದಿನಾಂಕ 15.07.2024 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ವಕೀಲರಿಂದ</u>**

ಮಾದೇಗೌಡರ ಮಗ ಎಂ.ಮಾದಯ್ಯ, ಗೊಂಡೇಹೊಸಹಳ್ಳಿ ನನಗೆ ತಿಳಿದಿರುವುದಿಲ್ಲ. ನನ್ನ ಮೇಲೆ ಮತ್ತು ನನ್ನ ತಾಯಿ ಹೊನ್ನಮ್ಮ 1 ನೇ ಪ್ರತಿವಾದಿ ಮೇಲೆ ಮಾದೇಗೌಡರ ಮಗ ಎಂ.ಮಾದಯ್ಯ ಅಸಲು ದಾವೆ ಸಂಖ್ಯೆ 126/1986 ರಂತೆ ಹಣ ವಸೂಲಾತಿ ದಾವೆ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ಮತ್ತು 1 ನೇ ಪ್ರತಿವಾದಿ ಹಣಪಾವತಿಸಲು ಬಾದ್ಯರು ಎಂದು ತೀರ್ಪು ನೀಡಿತ್ತು ಎಂದರೆ ಸರಿಯಲ್ಲ. ಅಂತೆಯೇ ಮಾದೇಗೌಡರ ಮಗ ಎಂ.ಮಾದಯ್ಯ ನಮ್ಮ ಮೇಲೆ 134/1986 ರಂತೆ ಜಾರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ದಾವ ಸ್ವತ್ತು ನ್ಯಾ.ದ ಜಾರಿ ಅರ್ಜಿ ಆದೇಶದಂತೆ ಬಹಿರಂಗ ಹರಾಜಿನಲ್ಲಿ ದಿ. 18.06.1987 ರಂದು ವಾದಿಯ ಗಂಡ ಹುಚ್ಚೇಗೌಡ ದಾವ ಸ್ವತ್ತನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ದಿ. 30.06.1987 ರಂದು ಸದರಿ ಹರಾಜನ್ನು ಖಚಿತಪಡಿಸಿ ಸ್ಥಿರೀಕರಿಸಿರುತ್ತಾರೆ ಎಂದರೆ ಸರಿಯಲ್ಲ. ದಿ. 28.11.1988 ರಂದು ಮಾರಾಟ ಪ್ರಮಾಣ ಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ತಯಾರು ಮಾಡಲು ಒಕ್ಕಣೆಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನಾನು ಈ ದಾವೆಯಲ್ಲಿ ಪ್ರತಿವಾದ ಪತ್ರಸಲ್ಲಿಸಲು ಒಕ್ಕಣೆ ಮತ್ತು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾನು

ಖಾತೆಯನ್ನು ವಜಾಕರಿಸಲು ಅಸಿಸ್ಟೆಂಟ್ ಕಮೀಷನರ್ ಗೆ ಮೇಲ್ಮನವಿಯನ್ನು ಸಲ್ಲಿಸಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಈಗಲೂ ಸಹ ದಾವ ಷೆಡ್ಯೂಲ್ ಸ್ವತ್ತಿನ ಪಹಣಿ ಪತ್ರಿಕೆಯು ವಾದಿ ಸಿದ್ದಮ್ಮನ ಹೆಸರಿನಲ್ಲಿ ನಮೂದು ಇದೆ ಎಂದರೆ ಸರಿಯಲ್ಲ, ನನ್ನ ತಾಯಿಯ ಹೆಸರಿನಲ್ಲಿದೆ. ನನ್ನ ತಾಯಿಯ ಹೆಸರಿನಲ್ಲಿರುವ ಬಗ್ಗೆ ನಾನು ನ್ಯಾ.ಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ಯಾವ ಉದ್ದೇಶಕ್ಕಾಗಿ ಅಸಿಸ್ಟೆಂಟ್ ಕಮೀಷನರ್ ಗೆ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ತಿಳಿದಿರುವುದಿಲ್ಲ.

ನಿಡಿ 5 ರಂತೆ ದಾವ ಷೆಡ್ಯೂಲ್ ಸ್ವತ್ತು 1 ನೇ ಪ್ರತಿವಾದಿಯಿಂದ ವಾದಿಯ ಹೆಸರಿಗೆ ಮ್ಯೂಟೇಷನ್ ವಹಿ ಬದಲಾವಣೆಗೊಂಡಿರುತ್ತದೆ ಎಂದರೆ ಸರಿಯಲ್ಲ. ನಾನು ನಿಡಿ 5 ನ್ನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ನಾನು ಜಾರಿ ಸಂಖ್ಯೆ 134/1986 ರ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ದಾವ ಷೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಯಾರಿದ್ದಾರೆ ಎಂದು ನ್ಯಾ.ದ ನಿಯೋಗಿಯನ್ನು ನೇಮಕ ಮಾಡಿಕೊಂಡು ವರದಿಯನ್ನು ಪಡೆಯಲು ನನ್ನ ಯಾವುದೇ ತಕರಾರು ಇರುವುದಿಲ್ಲ. ಜಾರಿ ಸಂಖ್ಯೆ 134/1986 ರಂತೆ ಖರೀದಿ ಪ್ರಮಾಣ ಪತ್ರ ಪಡೆದ ನಂತರ ವಾದಿಯ ಗಂಡ ಮಾಲೀಕನಾಗಿ ಸ್ವಾಧೀನಾನುಭವದಲ್ಲಿದ್ದು, ವಾದಿಯ ಗಂಡನ ಮರಣದ ನಂತರ ವಾದಿ ಸ್ವಾಧೀನಾನುಭವದಲ್ಲಿದ್ದು ಇಂದಿಗೂ ಸಹ ವಾದಿಯೇ ಸ್ವಾಧೀನಾನುಭವದಲ್ಲಿದ್ದಾರೆ ಸದರಿ ಎಲ್ಲಾ ಸಂಗತಿಗಳು ತಿಳಿದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಬನ್ನೂರಿನ ಚಾಮಲಪುರದ ವಾಸಿ ಎಂದರೆ ಸರಿಯಲ್ಲ. ವಾದಿ ಬೇರೆ ಊರಿನಲ್ಲಿ ವಾಸಿ

ಇರುವುದರಿಂದ ನಾನು ಅವರ ಸ್ವಾಧೀನಕ್ಕೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮಹಿಳೆಯಾಗಿದ್ದು ಸಾಧ್ಯವಾದರೆ ದಾವ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ವಾಧೀನದಲ್ಲಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಸಲ್ಲಿಸಿರುವ ತಕರಾರು ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ವಾದಿ ಮತ್ತು ವಾದಿ ಕುಟುಂಬದವರು ದಾವ ಸ್ವತ್ತಿನ ಮಾಲೀಕರಾಗಿದ್ದು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ